146ನೇ ವಿಧಾನ
ನಿ-72
ಕ್ರ-29

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ಇವರು ನಿಯಮ 72 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

*****

ವಿಷಯ: ಮಂಡ್ಯ ಜಿಲ್ಲೆಯ ಬಸರಾಳು ಹೋಬಳಿ ಕಾರೆಕಟ್ಟೆ ಗ್ರಾಮದ ಸಮೀಪದಲ್ಲಿರುವ ರಾಸಾಯನಿಕ ತಯಾರಿಕಾ ಕಾರ್ಖಾನೆಯಿಂದ ಸುತ್ತಮುತ್ತಲಿನ ಜನರಿಗೆ ತೊಂದರೆಯಾಗಿರುವುದು ಈಗಾಗಲೇ ಎಲ್ಲಾ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದರಿಂದ ಸುತ್ತಮುತ್ತಲಿನ ಸುಮಾರು 15 ಎಕರೆ ವ್ಯಾಪ್ತಿಯ ಜಮೀನುಗಳಲ್ಲಿ ಬೆಳೆಯಲಾಗಿದ್ದ ತೆಂಗು, ರಾಗಿ, ಹುರಳಿ ಸೇರಿದಂತೆ ಮತ್ತಿತರ ಬೆಳೆಗಳ ಮೇಲೆ ತೀವ್ರ ದುಷ್ಪರಿಣಾಮ ಬೀರಿ ಬಹುತೇಕವಾಗಿ ರೈತರಿಗೆ ನಷ್ಟವಾಗಿದೆ. ಇದಲ್ಲದೆ ಕಾರ್ಖಾನೆ ಹೊರಸೂಸುವ ವಿಷಾನೀಲದಿಂದ ಜನ ಹಾಗೂ ಜಾನುವಾರುಗಳ ಆರೋಗ್ಯವು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಆದ ಕಾರಣ ಇದರಿಂದ ರೈತರಿಗೆ ಆಗಿರುವ ನಷ್ಟಕ್ಕೆ ಸರ್ಕಾರದ ವತಿಯಿಂದ ಅಥವಾ ಕಾರ್ಖಾನೆಯಿಂದ ಸೂಕ್ತ ಪರಿಹಾರವನ್ನು ನೀಡಬೇಕಾಗಿರುವ ಕುರಿತು ರೈತರ ಹಿತದೃಷ್ಟಿಯಿಂದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರು ಬಸರಾಳು ಹೋಬಳಿ ಕಾರೆಕಟ್ಟೆ ಸರ್ವೇ ನಂ. 113/1, 113/2 ರಲ್ಲಿ ಸ್ಥಾಪಿಸಿರುವ ಮೆ॥ ಕೀರ್ತಿ ರಸಾಯನಿಕ ಸಲ್ಫೂರಿಕ್ ಆಸಿಡ್ ತಯಾರಿಕಾ ಕಾರ್ಖಾನೆಯಲ್ಲಿ ವಿಷಾನೀಲ ಸೋರಿಕೆಯಾಗಿರುವ ಬಗ್ಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಫ್ಯಾಕ್ಟರೀಸ್ & ಬಾಯ್ಲರ್ ಇಲಾಖೆ ಮತ್ತು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ನಿಯಮಗಳು ಉಲ್ಲಂಘನೆಯಾಗಿರುವ ಬಗ್ಗೆ ಪರಿಶೀಲಿಸುವಂತೆ ಹಾಗೂ ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಅದರಂತೆ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಜಿಲ್ಲೆ ಅವರು ~~ಕಾರ್ಖಾನೆ ಮತ್ತು ಬಾಯ್ಲರ್ ಅಧಿಕಾರಿಗಳೊಂದಿಗೆ ಸದರಿ ಕಾರ್ಖಾನೆಗೆ ದಿನಾಂಕ:~~ 18.01.2022 ರಂದು ಭೇಟಿ ನೀಡಿರುತ್ತಾರೆ.

–2

ಈ ವಿಷಯವು ಕಾರ್ಖಾನೆ ಮತ್ತು ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತಾ ಇಲಾಖೆಗೆ ಸಂಬಂಧಿಸಿದ ವಿಷಯವಾಗಿದ್ದು, ನಿಯಮಾನುಸಾರ ಪರಿಶೀಲಿಸಿ ಅದೇ ದಿನ ಕಾರ್ಖಾನೆಗಳ ಕಾಯ್ದೆ 1948 ರ ಕಲಂ 40(2)ರ ಪ್ರಕಾರ ನ್ಯೂನತೆಯಿಂದ ಅನಿಲ ಸೋರಿಕೆ ಆಗಿರುವ ಗ್ಯಾಸ್ ಪಾಸಿಂಗ್ ಡಕ್ಟ್ ಅನ್ನು ಯಾವುದೇ ಕಾರಣಕ್ಕೂ ಉಪಯೋಗಿಸಬಾರದೆಂದು ನಿಷೇಧ ಮಾಡಿ ಕಂಪನಿಯವರಿಗೆ ಸದರಿ ಇಲಾಖೆಯು ಸೂಚಿಸಿರುತ್ತದೆ.

ಮುಂದುವರೆದಂತೆ, ಸಹಾಯಕ ಕೃಷಿ ನಿರ್ದೇಶಕರು, ಮಂಡ್ಯ ತಾಲ್ಲೂಕು, ಮಂಡ್ಯ ಇವರು ತಮ್ಮ ಪತ್ರ ದಿನಾಂಕ: 19.01.2022ರಲ್ಲಿ ತಹಸೀಲ್ದಾರ್, ಮಂಡ್ಯ ತಾಲ್ಲೂಕು ಇವರಿಗೆ ನೀಡಿರುವ ವಿವರಗಳನ್ವಯ ವಿಷಾನಿಲದಿಂದ ಸುಮಾರು ಅಂದಾಜು 9 ಎಕರೆ ಹುರುಳಿ, 2 ಎಕರೆ ರಾಗಿ ಬೆಳೆಗೆ ಹಾನಿಯಾಗಿರುತ್ತದೆ. ಅಲ್ಲದೇ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಮಂಡ್ಯ ಇವರು 4.6 ಎಕರೆ ಜಮೀನಿನಲ್ಲಿದ್ದ ತೆಂಗು, ಟೊಮೋಟೋ, ಸೌತೆಕಾಯಿ ಬೆಳೆ ನಷ್ಟವಾಗಿರುವುದಾಗಿ ವರದಿ ನೀಡಿರುತ್ತಾರೆ. ಈ ಬೆಳೆ ನಷ್ಟವನ್ನು ಕಂದಾಯ ಇಲಾಖೆ ಹಾಗೂ ಕೃಷಿ / ತೋಟಗಾರಿಕೆ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆಸಿ ನಂತರ ವರದಿ ನೀಡಲಾಗುವುದೆಂದು ತಿಳಿಸಿರುತ್ತಾರೆ.

ಸಹಾಯಕ ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ ಸುರಕ್ಷತೆ ಇಲಾಖೆ, ವಲಯ–2, ಮೈಸೂರು ಇವರು ಮೆ॥ ಕೀರ್ತಿ ರಸಾಯನಿಕ ಕಾರ್ಖಾನೆಯ ಪ್ರವರ್ತಕರಿಗೆ ವಿಷಾನಿಲ ಸೋರಿಕೆಯಾಗಿರುವ ಬಗ್ಗೆ ಕಾರಣ ಕೇಳಿ ನೋಟಿಸನ್ನು ದಿನಾಂಕ: 08.02.2022 ರಂದು ನೀಡಿದ್ದು, 7 ದಿನಗಳೊಳಗಾಗಿ ಕಾರ್ಖಾನೆಯು ಉತ್ತರ ನೀಡಬೇಕಾಗಿದ್ದು, ನಂತರ ಕಾರ್ಖಾನೆಯವರ ಹೇಳಿಕೆಯನ್ನು ಪರಿಶೀಲಿಸಿ, ನಿಯಮಾನುಸಾರ ಮುಂದಿನ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.

**ಸಂಖ್ಯೆ: ಸಿಐ 38 ಎಸ್‌ಪಿಐ 2022**

**(ಡಾ॥ ಮುರುಗೇಶ್ ಆರ್ ನಿರಾಣಿ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು